**ಸಾಕ್ಷಿಯನ್ನು ದಿನಾಂಕಃ 04-02-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರವರಿಂದಃ**

ನನ್ನ ತಂದೆಯ ಹೆಸರು ನರಸಿಂಗಪ್ಪ ತಂದೆ ಸಣ್ಣಬಸ್ಸಪ್ಪ ಎಂದು ಇರುವುದು. ನನ್ನ ಅಜ್ಜನ ಹೆಸರು ಸಣ್ಣಬಸ್ಸಪ್ಪ ತಂದೆ ಮಾರಪ್ಪ ಎಂದು ಇರುವುದು. ನನ್ನ ಅಜ್ಜನ ತಮ್ಮನ ಹೆಸರು ಗೌಳಿ ಶಿವಪ್ಪ ತಂದೆ ಮಾರಪ್ಪ ಎಂದು ಇರುವುದು. ಈ ಅರ್ಜಿಯನ್ನು ಸದರಿ ಗೌಳಿ ಶಿವಪ್ಪ ಇವರ ಮರಣ ಪ್ರಮಾಣ ಪತ್ರವನ್ನು ಪೂರೈಸುವಂತೆ ನಿರ್ದೇಶನ ಕೋರಿ ಸಲ್ಲಿಸಿರುತ್ತೇನೆ. ನಾನು ಈಗ ಹೇಳಿದ ಎಲ್ಲಾ ವಿಚಾರಗಳು ಮತ್ತು ಈ ಹಿಂದೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ನನ್ನ ಪ್ರಾರ್ಥನೆ ಇರುವುದು. ನಾನು ಈ ದಿನ ನೋಟರಿಯವರ ಮುಂದೆ ಪ್ರಮಾಣಿಕರಿಸಿದ ಶಪಥ ಪತ್ರವನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿಯು ಅದನ್ನು ಗುರುತಿಸಿದ್ದು ಅದನ್ನು ***ನಿಪಿ 4*** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಗೈರು ಹಾಜರು ಇರುವ ಕಾರಣ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ. ಹೇ ಕೇ ಸರಿಯಿದೆ.**

04-02-2026

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**